(ಸಾಕ್ಷಿಯನ್ನು ದಿನಾಂಕ 29.03.2021 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಶ್ರೀ ಬಿ.ಕೆ.ವಿ. ವಕೀಲರಿಂದಃ**

ಬ್ಯಾಟೀಗೌಡ ಮತ್ತು ರಂಗಮ್ಮರವರನ್ನು ನೋಡಿರುತ್ತೇನೆ. ಬ್ಯಾಟೀಗೌಡರವರು ಸುಮಾರು 35 ವರ್ಷಗಳ ಹಿಂದೆ ಹಾಗೂ ರಂಗಮ್ಮ ನವರು ಸುಮಾರು 50 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಬ್ಯಾಟೀಗೌಡ ಮತ್ತು ರಂಗಮ್ಮರವರ ಮಗನ ಹೆಸರು ಗೌಡಯ್ಯ ಆಗಿರುತ್ತದೆ. ಗೌಡಯ್ಯನಿಗೆ ಒಬ್ಬನೇ ಮಗ ಅವರ ಹೆಸರು ಬೆಟ್ಟಪ್ಪ ಆಗಿರುತ್ತದೆ. ಬ್ಯಾಟೀಗೌಡರವರಿಗೆ ನಾಲ್ಕು ಜನ ಮಕ್ಕಳು, ಅವರೆಂದರೆ ರಂಗಯ್ಯ ಮತ್ತು ಇತರರ ಹೆಸರು ಗೊತ್ತಿಲ್ಲ. ಗೌಡಯ್ಯನ ಜೊತೆ ರಂಗಮ್ಮ ಎಂಬ ಸಹೋದರಿ ಹುಟ್ಟಿರುತ್ತಾರೆ. ಗೌಡಯ್ಯ ರವರು 1992–93 ರಲ್ಲಿ ಮರಣ ಹೊಂದಿರುತ್ತಾರೆ. ಬ್ಯಾಟೀಗೌಡ ಮರಣ ಹೊಂದಿದ ಬಗ್ಗೆ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ ಬ್ಯಾಟಪ್ಪ ಸತ್ತಾಗ ನನಗೆ 35 ವರ್ಷ ಆಗಿತ್ತು. ನನ್ನ ಜನ್ಮ ದಿನಾಂಕದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. 6 ನೇ ವಾದಿಯ ಜನನ ಪ್ರಮಾಣ ಪತ್ರವನ್ನು ಹಾಜರುಪಡಿಸಿಲ್ಲ. ನಾನು ಯಾವುದೇ ವಾದಿಯರ ಜನನ ಪ್ರಮಾಣ ಪತ್ರವನ್ನು ಹಾಜರುಪಡಿಸಿಲ್ಲ

1 ನೇ ವಾದಿ ನರಸಮ್ಮ ಮರಣ ಹೊಂದಿರುತ್ತಾರೆ. ಅವರು ಕೋರಮಂಗಲದಲ್ಲಿ ಮರಣ ಹೊಂದಿರುತ್ತಾರೆ. ಇವರ ವಿವಾಹ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. 2 ನೇ ವಾದಿಯು ತುಮಕೂರಿನಲ್ಲಿ ವಾಸವಾಗಿರುತ್ತಾರೆ. 2 ನೇ ವಾದಿಯು ಜೀವಂತವಾಗಿರುತ್ತಾರೆ. ಆಕೆಯ ವಿಚಾರಣೆ ಆಗಿರುವುದಿಲ್ಲ. ಆಕೆಯ ವಿವಾಹ ದಾಖಲೆಯನ್ನು ಹಾಜರು ಮಾಡಿರುವುದಿಲ್ಲ. ಅದೇ ರೀತಿಯಾಗಿ ಆಕೆ ಬ್ಯಾಟಪ್ಪನ ಮಗಳು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. 3 ನೇ ವಾದಿಯು ಅವತಿಯಲ್ಲಿ ನಮ್ಮ ಜೊತೆ ಇರುತ್ತಾರೆ. 3 ಮತ್ತು 6 ನೇ ವಾದಿಯರು ಜೀವಂತವಾಗಿರುತ್ತಾರೆ.

1 ನೇ ಪ್ರತಿವಾದಿಯನ್ನು ಈ ಪ್ರಕರಣದಲ್ಲಿ ಯಾವ ಕಾರಣಕ್ಕಾಗಿ ಸೇರಿಸಿರುತ್ತೀರಿ ಎಂದರೆ ಸಾಕ್ಷಿಯು ತಮ್ಮ ತಾತ ತಂದೆಯು ವಾರೆ ಆಧಾರದ ಮೇಲೆ ಜಮೀನು ನೀಡಿದ್ದು, ಅದನ್ನು ಬಿಡಿಸಿಕೊಳ್ಳಲು ಸೇರಿಸಿರುತ್ತೇವೆ ಎನ್ನುತ್ತಾರೆ. ನಮ್ಮ ತಂದೆಯು ಜಮೀನನ್ನು 1 ನೇ ಪ್ರತಿವಾದಿಗೆ 1976 ರಲ್ಲಿ ವಾರೆಗೆ ಕೊಟ್ಟಿರುತ್ತಾರೆ. ಈ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಹಾಗೂ ಯಾವುದೇ ದಾಖಲೆ ಆಗಿರುವುದಿಲ್ಲ. 1974 ಮಾರ್ಚ್ ತಿಂಗಳ ನಂತರ ಯಾವುದೇ ಜಮೀನನ್ನು ವಾರೆಗೆ ಕೊಡಬಾರದು ಎಂಬ ನಿಯಮ ಇದೆ ಎಂದರೆ ಸಾಕ್ಷಿಯು ನಮ್ಮ ತಾತನವರು

ಕೊಟ್ಟಿದ್ದು ನಂತರ ನಮ್ಮ ತಂದೆಗೆ ಕಷ್ಟವಿದ್ದ ಕಾರಣ, ಅವರು ಓದಿರದ ಕಾರಣ ವಾರೆಗೆ ಕೊಟ್ಟಿರುತ್ತಾರೆ ಎನ್ನುತ್ತಾರೆ. 1 ನೇ ಪ್ರತಿವಾದಿಯ ಮೇಲೆ ಜಮೀನನ್ನು ಬಿಡಿಸಿಕೊಡಿ ಎಂದು ಪರಿಹಾರ ಕೋರಿರುತ್ತೇನೆ. ನಮಗೆ ಹಿಂದೂ ವಾರಸು ಕಾಯಿದೆ ಅನ್ವಯಿಸುತ್ತದೆ ಎಂದರೆ ಗೊತ್ತಿಲ್ಲ.

1 ನೇ ಪ್ರತಿವಾದಿಯ ಮೇಲೆ ಪರಿಹಾರ ಕೋರಿರುವ ಜಮೀನಿನ ಸರ್ವೆ ನಂಬರ್ 115/8, 115/11, 115/12, 116/1 ಆಗಿರುತ್ತದೆ. ನಾನು ಈ ದಾವೆಯಲ್ಲಿ ನನ್ನ ತಂದೆಯು 1 ನೇ ಪ್ರತಿವಾದಿಗೆ ಬರೆದುಕೊಟ್ಟ ಕ್ರಯ ಪತ್ರದ ನಕಲನ್ನು ನಿ.ಪಿ.2 ರಂತೆ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನಿ.ಪಿ.2 ನ್ನು ನಾನೇ ಹಾಜರುಮಾಡಿರುತ್ತೇನೆ ಎಂದರೆ ಸರಿ. ನಿ.ಪಿ. 2 ರಲ್ಲಿ ತಮ್ಮ ತಂದೆಯವರು ತಮ್ಮಗಳ ಪರವಾಗಿ ತುಮಕೂರಿನಲ್ಲಿ ನಿವೇಶನ ಖರೀದಿಸಲು ಹಾಗೂ ಸಾಲವನ್ನು ತೀರಿಸಲು ಮಾರಾಟ ಮಾಡಿದ್ದಾರೆಂದು ನಮೂದಿಸಲಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದು ಸುಳ್ಳಾಗಿರುತ್ತದೆ ಎನ್ನುತ್ತಾರೆ. ನಿ.ಪಿ.2 ರಲ್ಲಿ ನಮೂದಿಸಿರುವ ಆಸ್ತಿಗಳನ್ನು ಈ ಪ್ರಕರಣದಲ್ಲಿ ದಾವಾ ಆಸ್ತಿಗಳಾಗಿ ಮಾಡಲಾಗಿರುತ್ತದೆ. ನಿ.ಪಿ.2 ರಲ್ಲಿ ದಾವಾ ಎ ಷೆಡೂಲ್ ಆಸ್ತಿಗಳನ್ನು 1 ನೇ ಪ್ರತಿವಾದಿಯ ಸ್ವಾದೀನಕ್ಕೆ ಅದೇ ಬಿಡಲಾಗಿರುತ್ತದೆ ಎಂದು ನಮೂದಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಈ ರೀತಿ ಸ್ವಾದೀನ ಬಿಟ್ಟಿಲ್ಲ ಎನ್ನುತ್ತಾರೆ. ನಾವು ಈ ದಾವೆಯನ್ನು ನಮ್ಮ ತಂದೆಯು ಯಾವುದೇ ಹಕ್ಕಿಲ್ಲದೇ ಮಾರಾಟ ಮಾಡಿದ್ದು, ನಮಗೆ ಹಕ್ಕಿದ್ದು ಅವರು ಮಾಡಿದ ಕ್ರಯ ಪತ್ರವನ್ನು ವಜಾ ಮಾಡಿ ಎಂದು ಹಾಕಿರುತ್ತೇನೆ ಎಂದರೆ ಸರಿ . ನಿ.ಪಿ. 2 ರಲ್ಲಿ ತಮ್ಮ ವಯಸ್ಸನ್ನು ತಮ್ಮ ತಂದೆಯವರು ಮೈನರ್ ಎಂದು ತೋರಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ ಪತ್ರವೇ ತಪ್ಪಿರುತ್ತದೆ ಎನ್ನುತ್ತಾರೆ. ತಮ್ಮ ಪ್ರಕಾರ 1996 ನೇ ಇಸವಿಗೆ ತಮ್ಮ ವಯಸ್ಸು 20 ವರ್ಷ ಆಗುತ್ತದೆ ಎಂದರೆ ಸರಿ. ತಮಗೆ ದಾವಾ ಎ ಷೆಡೂಲ್ ಮೇಲೆ ದಾವೆ ಹಾಕಲು ಯಾವುದೇ ಅಧಿಕಾರ, ಹಕ್ಕಿಲ್ಲ ಹಾಗೂ ಕಾಲಪರಿಮಿತಿಯಲ್ಲಿರುವುದಿಲ್ಲ ಎಂದರೆ ಸರಿಯಲ್ಲ.

ತಮ್ಮ ತಂದೆಯು ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅವರಿಗೆ ಅವರ ಸಂಬಳದಲ್ಲಿ ದೊಡ್ಡ ಕುಟುಂಬವನ್ನು ನಿರ್ವಹಣೆ ಮಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. 1974 ರಿಂದ 1988 ರ ವರೆಗೂ ಕುಣಿಗಲ್ ನ ಸುತ್ತಮುತ್ತಲೂ ಬರಗಾಲವಾಗಿ ಯಾವುದೇ ಮಳೆ ಬಾರದ ಕಾರಣ ಯಾವುದೇ ಬೆಳೆಗಳನ್ನು ಬೆಳೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ಆಸ್ತಿಗಳು ಬಡ್ಡಿತಿಮ್ಮನ ಪಾಳ್ಯದಲ್ಲಿದ್ದು, ಆ ಗ್ರಾಮಕ್ಕೆ ಯಾವುದೆ ಕೆರೆಯ ಮತ್ತು ನಾಲೆಯ ಆಶ್ರಯವಿಲ್ಲ ಎಂದರೆ ಸಾಕ್ಷಿಯು ಕೆರೆಯ ಆಸರೆ ಇಲ್ಲ. ಆದರೆ ನಾಲೆಯ ವಿಚಾರ ಗೊತ್ತಿಲ್ಲ ಎನ್ನುತ್ತಾರೆ. ಅದು ಮಳೆಯಾಶ್ರಿತ ಜಮೀನು ಎಂದರೆ ಸರಿ. ತಮ್ಮ ತಂದೆಗೆ ಯಾವ್ಯಾವ ಪ್ರದೇಶಕ್ಕೆ

ವರ್ಗಾವಣೆಯಾಗಿತ್ತು ಎಂದರೆ ಸಾಕ್ಷಿಯು ತುಮಕೂರು, ಹಾಸನ, ಕೋಲಾರ, ಕೋರಮಂಗಲಕ್ಕೆ ವರ್ಗಾವಣೆಯಾಗಿತ್ತು ಎನ್ನುತ್ತಾರೆ. ಆಗ ತಮ್ಮ ತಂದೆಗೆ ಎಷ್ಟು ಸಂಬಳ ಬರುತ್ತಿತ್ತು ಎಂಬುದು ನನಗೆ ಗೊತ್ತಿಲ್ಲ ಮತ್ತು ನಾನು ಕೇಳಲು ಹೋಗಿಲ್ಲ. ಅವರ ಸಂಬಳದಲ್ಲಿ ಮಕ್ಕಳಿಗೆ ಎರಡು ಹೊತ್ತಿನ ಊಟ ಹಾಕುವುದಕ್ಕೂ ಕಷ್ಟವಾಗಿತ್ತು ಎಂದರೆ ಸರಿಯಲ್ಲ. ನಾನು ವಯಸ್ಕನಾದ ನಂತರ 3 ವರ್ಷದ ಒಳಗೆ ಈ ದಾವೆಯನ್ನು ಸಲ್ಲಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಆರ್ ಟಿ ಸಿ ನನ್ನ ತಾತನ ಹೆಸರಿನಲ್ಲಿ ಬರುತ್ತಿದ್ದ ಕಾರಣ ದಾವೆ ಮಾಡಿಲ್ಲ ಎನ್ನುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.